ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿದೆ

ಆ) ಪ್ರಸ್ತುತ ಪ್ರಥಮ ದರ್ಜೆ ಕಾಲೇಜು ಸ್ಥಾಪನೆಯ ಪ್ರಸ್ತಾವನೆಯ ಸರ್ಕಾರದ ಮುಂದೆ ಇರುವುದಿಲ್ಲ

ಇ) ಇಲ್ಲ

ಈ) ಸರ್ಕಾರಿ ಪ್ರೌಢಶಾಲೆ ಮತ್ತು ಕಾಲೇಜುಗಳನ್ನು ಅವಶ್ಯಕತೆಯ ಆಧಾರದ ಮೇಲೆ ನೀಡಲಾಗುತ್ತದೆ

508(716) ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯ ಕೇಂದ್ರ ಬಿಂದುವಾಗಿರುವ ಹುಲಸೂರು ಕ್ಷೇತ್ರದ ರೈತರು ತಾವು ಬೆಳೆಯುತ್ತಿರುವ ಬೆಳೆಗಳನ್ನು ಅಕ್ಕಪಕ್ಕದ ರಾಜ್ಯಗಳಲ್ಲಿ ಮಾರಾಟ ಮಾಡುತ್ತಿರುವುದರಿಂದ ರಾಜ್ಯಕ್ಕೆ ಬಹಳಷ್ಟು ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಹಾಗಿದ್ದಲ್ಲಿ ಹುಲಸೂರು ಮೀಸಲು ಕ್ಷೇತ್ರದಲ್ಲಿ ಕೃಷಿ ಮಾರುಕಟ್ಟೆಯನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪ್ರಕಾಶ್ ಬಿ ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ),ಆ) ಹುಲಸೂರು ಉಪ ಮಾರುಕಟ್ಟೆಯನ್ನು ದಿನಾಂಕ 29-01-1977 ರಲ್ಲಿ ಘೋಷಿಸಿ ಸ್ಥಾಪನೆ ಮಾಡಲಾಗಿದ ಕೃಷಿ ಉತ್ಪನ್ನಗಳು ಪಕ್ಕದ ರಾಜ್ಯದಲ್ಲಿ ಮಾರಾಟವಾಗುತ್ತಿವೆಯೇ ಎಂಬ ಬಗ್ಗೆ ಸತತವಾಗಿ ಗಮನಿಸಲಾಗುತ್ತಿದೆ

510(818) ಶ್ರೀ ರೇಣುಕಾಚಾರ್ಯ ಎಂ ಪಿ (ಹೊನ್ನಾಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನಗಳಿಗೆ ಉತ್ತರಿಸುವರೆ ?

ಅ) ಹೊನ್ನಾಳಿ ತಾಲ್ಲೂಕಿನಲ್ಲಿ ಜಾನುವಾರುಗಳಿಗೆ ಮೇವು ಸಂಗ್ರಹಿಸಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ

ಆ) ಸಂಗ್ರಹಿಸಿಟ್ಟಿರುವ ಮೇವಿನ ಪ್ರಮಾಣ ಎಷ್ಟು

ಇ) ಮಳೆಗಾಲ ಪ್ರಾರಂಭವಾಗಿರುವುದರಿಂದ ಸಂಗ್ರಹಿಸಿಟ್ಟಿರುವ ಮೇವು ಕೊಳೆತು ಹೋಗದಂತೆ ರಕ್ಷಿಸಲು ಸರಕಾರ ಕೈಗೊಂಡಿರುವ ಕ್ರಮಗಳೇನು

ಈ) ಈ ಮೇವನ್ನು ರೈತರಿಗೆ ಸರಿಯಾಗಿ ವಿತರಣೆ ಮಾಡಲು ಸರಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಬಂದಿದೆ

ಆ) ಒಟ್ಟು 830 ಟನ್ನುಗಳು (ಬತ್ತದ ಹುಲ್ಲು 502 ಮೆ ಟನ್ ಜೋಳದ ಕಡ್ಡಿ 328 ಮೆ ಟನ್)

ಇ) ಶೇಖರಿಸಿರುವ ಮೇವನ್ನು ತೆಂಗಿನ ಗರಿಗಳಿಂದ ಮತ್ತು ಪ್ಲಾಸ್ಟಿಕ್ ಶೀಟ್‌ಗಳನ್ನು ಹೊದಿಸಿ ರಕ್ಷಿಸಲಾಗಿದೆ

ಈ) 1 ಈ ಹಂಗಾಮಿ ಮುಂಗಾರು ಮಳೆಯ ಪ್ರಮಾಣವನ್ನು ಪರಿಗಣಿಸಿ ಆಗಸ್ಟ್ 2004ರ ನಂತರ ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುವುದು